सत्यमेव जयते
Goverment Of India

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ

ಕರ್ನಾಟಕ ಸರ್ಕಾರ

unicef
for every child

# ಅಂಗನವಾಡಿ ಶುಚಿತ್ವ ಹಾಗು ಶೌಚಾಲಯಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು



# ಅಂಗನವಾಡಿ ಶುಚಿತ್ವ ಹಾಗು ಶೌಚಾಲಯಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು

## ಬಾಲ ಸ್ವಚ್ಛತಾ ಅಭಿಯಾನ



**ಪೀಠಿಕೆ:**

ಸ್ವಚ್ಛ ಭಾರತ ಅಭಿಯಾನವನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ 2014ರ ನವೆಂಬರ್ 14ರಂದು 'ಬಾಲ ಸ್ವಚ್ಛತಾ ಅಭಿಯಾನ' ಯೋಜನೆಯನ್ನು ಜಾರಿಗೊಳಿಸಲಾಯಿತು. ಅಂಗನವಾಡಿಯು ಆರು ವರುಷದ ಒಳಗಿನ ಮಕ್ಕಳು ಹಾಗೂ ಗರ್ಭಿಣಿಯರು ಮತ್ತು ಹಾಲೂಣಿಸುವ ತಾಯಂದಿರ ಆರೋಗ್ಯ ಮತ್ತು ಪೋಷಕಾಂಶ ಸೇವೆಗಳ ಕಾಳಜಿವಹಿಸುವ ಕೇಂದ್ರವಾಗಿರುವದರಿಂದ 'ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆ' (ಐ ಸಿ ಡಿ ಎಸ್) ಯಲ್ಲಿ ಅಂಗನವಾಡಿಯ ಒಳಗಿನ ಮತ್ತು ಹೊರಗಿನ ಪರಿಸರದ ಸ್ವಚ್ಛತೆಯನ್ನು ಕಾಪಾಡುವುದು ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಮಕ್ಕಳು, ಗರ್ಭಿಣಿಯರು ಹಾಗೂ ಹಾಲೂಣಿಸುವ ತಾಯಂದಿರು ಸೋಂಕಿನಿಂದ ಬಳಲುವ ಗರಿಷ್ಠ ಸಾಧ್ಯತೆಗಳಿರುವುದರಿಂದ, ಅಂತಹ ಸೋಂಕಿನಿಂದ ಅವರನ್ನು ಕಾಪಾಡುವುದು ಹಾಗೂ ಸ್ವಚ್ಛ ಭಾರತ ಅಭಿಯಾನದ ಬಲವರ್ಧನೆ; ಈ ಎರಡೂ ಗುರಿಯನ್ನು ಸಾಧಿಸುವ ಉದ್ದೇಶದಿಂದ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ:

सत्यमेव जयते
Goverment Of India

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ

unicef
for every child

# ಅಂಗನವಾಡಿ ಶುಚಿತ್ವ ಹಾಗು ಶೌಚಾಲಯಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು

## ಬಾಲ ಸ್ವಚ್ಛತಾ ಅಭಿಯಾನ – ಸ್ವಚ್ಛ ಅಂಗನವಾಡಿಗಳು







- ಅಂಗನವಾಡಿಯ ಕಟ್ಟಡದಲ್ಲಿ ನೆಲವು ಸಿಮೆಂಟಿನದು, ಟೈಲ್ಸ್ ಅಥವಾ ಕಲ್ಲಿನದಾಗಿರಬೇಕು.ಅಂಗನವಾಡಿಯ ಕಟ್ಟಡದಲ್ಲಿ ನೆಲವು ಸಿಮೆಂಟಿನದು, ಟೈಲ್ಸ್ ಅಥವಾ ಕಲ್ಲಿನದಾಗಿರಬೇಕು.
- ಅಂಗನವಾಡಿಯ ಆವರಣವು ಸಾಕಷ್ಟು ಗಾಳಿ ಮತ್ತು ಬೆಳಕಿನಿಂದ ಕೂಡಿರಬೇಕು
- ಬಿರುಕುಗಳು, ಒರಟುಮೇಲ್ಮೈಗಳು, ತೆರೆದ ಸಂದುಮೂಲೆಗಳು ಮೊದಲಾದವು ಗಳಿದ್ದರೆ ಕೂಡಲೇ ದುರಸ್ತಿ ಮಾಡಲ್ಪಡಬೇಕು ಹಾಗೂ ನಿಯಮಿತವಾಗಿ ತಪಾಸಣೆ ಮಾಡುತ್ತಿರಬೇಕು
- ಛಾವಣಿಯ, ಗೋಡೆಯ ಮೇಲೆ ಕಟ್ಟಿಕೊಂಡ ಜೇಡರಬಲೆಯನ್ನು ಆಗಾಗ ತೆಗೆಯುತ್ತಿರುವುದರ ಬಗ್ಗೆ ಕಾಳಜಿ ವಹಿಸಬೇಕು
- ನೆಲವನ್ನು, ಚಾಪೆ, ಮ್ಯಾಟ್ ಮತ್ತು ಜಮಖಾನೆಗಳ ಸಮೇತ ದಿನಾಲೂ ಸ್ವಚ್ಛಗೊಳಿಸಬೇಕು.
- ಕೀಟಗಳು ಸೇರಿಕೊಂಡು ತೊಂದರೆ ಉಂಟುಮಾಡುವಂತಹ ತೂತುಗಳು, ಚರಂಡಿ ಮತ್ತು ಇನ್ನುಳಿದ ಸ್ಥಳಗಳನ್ನು ಕೂಡಲೇ ಮುಚ್ಚಿಸಬೇಕು.

सत्यमेव जयते
Goverment Of India

ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ

unicef
for every child

# ಅಂಗನವಾಡಿ ಶುಚಿತ್ವ ಹಾಗು ಶೌಚಾಲಯಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು

## ಬಾಲ ಸ್ವಚ್ಛತಾ ಅಭಿಯಾನ – ಸ್ವಚ್ಛ ಆವರಣ







- ಅಂಗನವಾಡಿಯ ಕಸ, ಕೊಳೆಗಳನ್ನು ಮುಚ್ಚಿದ ಕಸದಡಬ್ಬಗಳಲ್ಲಿ ಶೇಖರಿಸಬೇಕು ಹಾಗೂ ಗೊಬ್ಬರದಗುಂಡಿಗಳಿಗೇ ಹಾಕಬೇಕು
- ಬೇಡದ ವಸ್ತುಗಳು/ತ್ಯಾಜ್ಯಗಳ ಸಮಯಾನುಸಾರ ವಿಲೇವಾರಿಯನ್ನು ಕಡ್ಡಾಯಗೊಳಿಸಬೇಕು ಹಾಗೂ ತ್ಯಾಜ್ಯಡಬ್ಬಿಗಳನ್ನು ದಿನಾಲೂ ಖಾಲಿಮಾಡಿ ಸೋಂಕುನಿವಾರಕಗಳಿಂದ ಸ್ವಚ್ಛಗೊಳಿಸಬೇಕು ಮತ್ತು ಪುನಃ ಬಳಕೆ ಮಾಡುವ ಮೊದಲು ಒಣಗಿರಬೇಕು
- ಸೊಳ್ಳೆಯು ಹೆಚ್ಚುವುದನ್ನು ತಪ್ಪಿಸಲು ಅಂಗನವಾಡಿಯ ಸುತ್ತಮುತ್ತ, ಶೌಚಾಲಯದ ಆವರಣದಲ್ಲಿ ಮತ್ತು ಕೈಪಂಪಿನ ಸಮೀಪದಲ್ಲಿ ನೀರು ನಿಲ್ಲುವುದನ್ನು ತಪ್ಪಿಸಬೇಕು
- ನೆನೆ ಹೊಂಡ ಮಾಡುವುದು ಹಾಗೂ ಕೈತೋಟಕ್ಕೆ ಹರಿಯುವಂತೆ ಸೂಕ್ತ ನೀರು ಕಾಲುವೆ ರೂಪಿಸುವ ಮೂಲಕ ಅಂಗನವಾಡಿಯ ಅಡುಗೆ ಮನೆಯಿಂದ ಹೊರಬರುವ ತ್ಯಾಜ್ಯ ನೀರನ್ನು ಸುರಕ್ಷಿತವಾಗಿ, ಸೂಕ್ತವಾಗಿ ವಿಲೇವಾರಿ ಮಾಡಬೇಕು.

सत्यमेव जयते
Goverment Of India

ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ

unicef
for every child

# ಅಂಗನವಾಡಿ ಶುಚಿತ್ವ ಹಾಗು ಶೌಚಾಲಯಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು

## ಬಾಲ ಸ್ವಚ್ಛತಾ ಅಭಿಯಾನ – ಸ್ವಯಂ ಶುದ್ಧತೆ



- ನಿಯಮಿತವಾಗಿ ಕೂದಲನ್ನು ಸ್ವಚ್ಛಗೊಳಿಸಬೇಕು. ಕೂದಲನ್ನು ದಿನಾಲೂ ಬಾಚುತ್ತಿರಬೇಕು ಹಾಗೂ ಕೂದಲಲ್ಲಿ ಕೀಟಾಣುಗಳಿವೆಯೇ (ಹೇನು) ಎಂದು ಪರೀಕ್ಷಿಸುತ್ತಿರಬೇಕು
- ಪ್ರತಿದಿನ ಮುಂಜಾನೆ ಮತ್ತು ರಾತ್ರಿ ಮಲಗುವ ಮುನ್ನ ಹಲ್ಲನ್ನು ಉಜ್ಜಬೇಕು
- ದಿನಾಲೂ ಸ್ನಾನ ಮಾಡಬೇಕು ಮತ್ತು ಶುದ್ಧ ಬಟ್ಟೆಗಳನ್ನು ಧರಿಸಬೇಕು
- ಕೈಯಿನ ಎಲ್ಲ ಭಾಗಗಳನ್ನು ಮತ್ತು ಮೊಣಕೈವರೆಗೂ ಉಜ್ಜಿ ಕೈಯನ್ನು ಚೆನ್ನಾಗಿ ತೊಳೆಯಬೇಕು
- ಬರಿಪಾದಗಳು ಮಣ್ಣಿನ ಸೋಂಕಿನಿಂದ ತೊಂದರೆಗೊಳಗಾಗುವುದನ್ನು ತಡೆಯಲು ಚಪ್ಪಲಿ/ಶೂ ಧರಿಸಬೇಕು
- ಶೌಚಾಲಯದ ಬಳಕೆಯ ಬಳಿಕ ಮತ್ತು ಊಟ–ತಿಂಡಿಗೆ ಮುನ್ನ, ಶಿಶುಗಳ ಮಲಮೂತ್ರ ಶುದ್ಧಗೊಳಿಸಿದ ನಂತರ, ಗಾಯಗಳಿಗೆ ಚಿಕಿತ್ಸೆ ಮಾಡುವ ಮೊದಲು, ತ್ಯಾಜ್ಯ ಮತ್ತು ಕಸಕಡ್ಡಿಗಳ ನಿರ್ವಹಣೆಯ ಬಳಿಕ, ಇವೇ ಮೊದಲಾದ ಸಂದರ್ಭಗಳಲ್ಲಿ ಸೋಪಿನಿಂದ ತಪ್ಪದೇ ಕೈತೊಳೆಯಬೇಕು. ಕೈಉಗುರುಗಳನ್ನು ಆಗಾಗ ಕತ್ತರಿಸುತ್ತಿರಬೇಕು
- ಅಂಗನವಾಡಿಯಲ್ಲಿರುವ ಸಿಂಕ್‌ಗಳು ಚಿಕ್ಕಮಕ್ಕಳ ಕೈಗೆ ಎಟುಕುವಂತಿರಬೇಕು ಮತ್ತು ನಿಯಮಿತವಾಗಿ ಸ್ವಚ್ಛಗೊಳಿಸಬೇಕು

सत्यमेव जयते
Goverment Of India

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ

ಕರ್ನಾಟಕ ಸರ್ಕಾರ

unicef
for every child

# ಅಂಗನವಾಡಿ ಶುಚಿತ್ವ ಹಾಗು ಶೌಚಾಲಯಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು

## ಬಾಲ ಸ್ವಚ್ಛತಾ ಅಭಿಯಾನ – ಸ್ವಚ್ಛ ಆಹಾರ







- ಅಡುಗೆ ಮಾಡುವ ಪಾತ್ರೆಗಳು ಮತ್ತು ಬಡಿಸುವ ಸಾಧನಗಳನ್ನು ಸೂಕ್ತವಾದ ಡಿಟರ್ಜಂಟಿನಿಂದ ಉಜ್ಜಿ ಸ್ವಚ್ಛ ನೀರಿನಲ್ಲಿ ತೊಳೆದಿರಬೇಕು
- ಬೇಳೆಕಾಳುಗಳು ಮತ್ತು ಅಕ್ಕಿಗಳನ್ನು ಗಾಳಿಯಾಡದ ಬಿಗಿಯಾದ ಗೋಣಿಚೀಲದಲ್ಲಿ ಅಥವಾ ಡಬ್ಬದಲ್ಲಿ ಶೇಖರಿಸಿಡಬೇಕು
- ಟಿಎಚ್ಆರ್ ಅನ್ನು ಸ್ವಚ್ಛ ಸ್ಥಳಗಳಲ್ಲಿ ಶೇಖರಿಸಬೇಕು ಮತ್ತು ಪ್ಲಾಸ್ಟಿಕ್ ಶೀಟಿನಿಂದ ಮುಚ್ಚಿ ತೇವದಿಂದ ದೂರವಿಡಬೇಕು
- ಗೋಡೆಯಿಂದ ದೂರಕ್ಕೆ ಆಹಾರವಸ್ತುಗಳನ್ನು ಪೇರಿಸಿಡುವುದಕ್ಕೆ ಮರದ ಹಲಗೆಯನ್ನು ಬಳಸಬೇಕು
- ತಾಜಾ ದಾಸ್ತಾನುಗಳನ್ನು ಬಳಸುವ ಮೊದಲು ಹಳೆ ದಾಸ್ತಾನುಗಳನ್ನು ಬಳಸಿಕೊಳ್ಳಬೇಕು
- ಆಹಾರವಸ್ತುಗಳು, ಎಣ್ಣೆ ಮತ್ತು ನೀರನ್ನು ಸಂಗ್ರಹಿಸಲು ರಾಸಾಯನಿಕ ತುಂಬಿದ ಡಬ್ಬಗಳನ್ನು ಬಳಸಕೂಡದು
- ಅಡುಗೆಗಳನ್ನು ಬಡಿಸಲು ಉದ್ದವಾದ ಸೌಟು ಅಥವಾ ಚಮಚೆಗಳನ್ನು ಉಪಯೋಗಿಸಬೇಕು
- ಅಡುಗೆಗೆ ಬಳಸುತ್ತಿರುವ ಪದಾರ್ಥಗಳು ಕಲಬೆರಕೆ ಮತ್ತು ಕೀಟಗಳ ಸೋಂಕಿನಿಂದ ಮುಕ್ತವಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಿ
- ಅಡುಗೆಮನೆಯ ಆವರಣದಲ್ಲಿ ಯಾವುದೇ ಬಗೆಯ ವಿಷಯುಕ್ತ ರಾಸಾಯನಿಕಗಳು, ವಿಷಪದಾರ್ಥಗಳು/ಸೋಂಕುನಿವಾರಕಗಳನ್ನು ಶೇಖರಿಸಿ ಇಡಕೂಡದು

सत्यमेव जयते
Goverment Of India

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ

unicef
for every child

# ಅಂಗನವಾಡಿ ಶುಚಿತ್ವ ಹಾಗು ಶೌಚಾಲಯಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು

## ಬಾಲ ಸ್ವಚ್ಛತಾ ಅಭಿಯಾನ – ಸ್ವಚ್ಛ ಕುಡಿಯುವ ನೀರು








- ಆಹಾರವಸ್ತುಗಳನ್ನು ತೊಳೆಯಲು ಬಳಸುವ ನೀರು ಆಹಾರವಸ್ತುಗಳನ್ನು ಹಾಳು ಮಾಡದಂತೆ ಇಟ್ಟಿರಬೇಕು
- ನೀರನ್ನು ಸಂಗ್ರಹಿಸುವ ಟ್ಯಾಂಕ್/ಬಕೆಟ್‌ಗಳನ್ನು ಆಗಾಗ ಸ್ವಚ್ಛಗೊಳಿಸುತ್ತಿರಬೇಕು
- ಕುಡಿಯುವ ನೀರನ್ನು ಶುದ್ಧ ಮತ್ತು ಸುರಕ್ಷಿತವಾಗಿರುವ ಪಾತ್ರೆಗಳಲ್ಲಿ ಸಂಗ್ರಹಿಸಿಡಬೇಕು
- ನಲ್ಲಿ ಇರುವಂತಹ ಪಾತ್ರೆಗಳನ್ನೇ ಉಪಯೋಗಿಸಬೇಕು
- ಪಾತ್ರೆಗಳಿಂದ ನೀರನ್ನು ತೆಗೆದುಕೊಳ್ಳುವಾಗ ಅದರಲ್ಲಿ ಕೈ ಮುಳುಗಕೂಡದು. ಒಂದು ವೇಳೆ ನೀರಿನ ಫಿಲ್ಟರ್/ಪ್ಯೂರಿಫೈರ್‌ಗಳನ್ನು ಬಳಸಿದರೆ ಅದರಲ್ಲಿ ಸೂಚಿಸಿರುವ ಸ್ವಚ್ಛತಾ ನಿಯಮಗಳನ್ನು ಪಾಲಿಸಲೇಬೇಕು.
- ಕುಡಿಯಲು ಹಾಗೂ ಅಡುಗೆಗೆ ಕಾಯಿಸಿದ ನೀರನ್ನು ಬಳಸುವುದು ನೀರಿನ ಶುದ್ಧೀಕರಣ ಹಾಗೂ ಸಂಸ್ಕರಣದ ಸೂಕ್ತ ಕ್ರಮವಾಗಿರುತ್ತದೆ

सत्यमेव जयते
Goverment Of India

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ

unicef
for every child

# ಅಂಗನವಾಡಿ ಶುಚಿತ್ವ ಹಾಗು ಶೌಚಾಲಯಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು

## ಬಾಲ ಸ್ವಚ್ಛತಾ ಅಭಿಯಾನ – ಸ್ವಚ್ಛ ಶೌಚಾಲಯ







- ❖ ಶೌಚಾಲಯಗಳನ್ನು ಪ್ರತಿದಿನ ಮುಂಜಾನೆ ಮತ್ತು ಮಕ್ಕಳು ಮನೆಗೆ ತೆರಳಿದ ಬಳಿಕ ಸ್ವಚ್ಛಗೊಳಿಸಬೇಕು ಮತ್ತು ಎಲ್ಲ ಸಮಯದಲ್ಲಿಯೂ ಅಚ್ಚುಕಟ್ಟಾಗಿರಬೇಕು
- ❖ ಶೌಚಾಲಯದ ಸಮೀಪ ಸೂಕ್ತಸ್ಥಳದಲ್ಲಿ ಸೋಪು ಮತ್ತು ನೀರನ್ನು ಇಟ್ಟಿರಬೇಕು
- ❖ ಶೌಚಾಲಯಕ್ಕೆ ನಿಯಮಿತವಾಗಿ ನೀರಿನ ಪೂರೈಕೆ ಇರಬೇಕು
- ❖ ಮಕ್ಕಳ ಸ್ನೇಹಿ ಶೌಚಾಲಯವಿರುವುದು ಹೆಚ್ಚು ಸೂಕ್ತ

❖ ಮಕ್ಕಳ ಸ್ನೇಹಿ ಶೌಚಾಲಯದ ಮುಖ್ಯ ಅಗತ್ಯಗಳು ಈ ಕೆಳಗಿನಂತಿವೆ:

1. ಹೆಣ್ಣುಮಕ್ಕಳಿಗೆ ಹಾಗೂ ಗಂಡುಮಕ್ಕಳಿಗೆ ಪ್ರತ್ಯೇಕ ಶೌಚಾಲಯವಿರಬೇಕು.
2. ಮಕ್ಕಳಿಗೆ ಖಾಸಗಿತನ ಕಾಪಾಡುವಂತಿರಬೇಕು.
3. ಗೋಡೆಗಳ ಮೇಲೆ ಸಾಕುಪ್ರಾಣಿಗಳು, ಇನ್ನುಳಿದ ಪ್ರಾಣಿಗಳ ಆಕರ್ಷಕ ಚಿತ್ರಗಳಿಂದ ಕೂಡಿರಬೇಕು.
4. ಶೌಚಾಲಯದ ಒಳಗಡೆ ಸ್ವಚ್ಛಗೊಳಿಸುವ ಹಾಗೂ ತೊಳೆಯುವ ಸಾಧನಗಳಿರಬೇಕು.

ಅನುವಾದ: ಸ್ನೇಹ ಸ್ವಯಂ ಸೇವಾ ಸಂಸ್ಥೆ